ಧರಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನು ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1889ನೇ ಇಸವಿ ಆಗಸ್ಟ್ 7ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬಂದವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೆ ಹುಟ್ಟಿದ್ದು.	ದೇಣೆಯ ಸ್ವಭಾವಮತ್ತು ಆದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಮೈಸೂರು ಪುಷ್ಪವತಿ ಬ್ಯಾಂಕ್ (ಲಿ) ಸುಬ್ಬರಾಯ ಅಯ್ಯರ್	190 0 0	..	ಡಿಕ್ರೀ ಭಾಬತು.	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟು.

ನೋಟಿಸ.

1888—89ನೇ ಸಾಲ್‌ನಲ್ಲಿ ಮೈಸೂರು ಡಿಸ್ಟ್ರಿಕ್ಟು ಸ್ಟೇಟ್ ಫಾರೆಸ್ಟುಗಳಲ್ಲಿ ವುತ್ಪತ್ತಿಯಾದ ಇದರಡಿ ಕಂಡ ಅಳಲೇಕಾಯಿಯು 1889ನೇ ಇಸವಿ ಸೆಪ್ಟಂಬರು ತಾರೀಖು 2ರಲ್ಲು ಬಹಿರಂಗವಾದ ಹರಾಜು ಮೂಲಕ ಮೈಸೂರು ವೆಜ್ಯಾರ್ಡಿನಲ್ಲಿ ವಿಕ್ರಯಿಸಲ್ಪಡುತ್ತದೆ.

ಅಳಲೇಕಾಯಿ ಸುಮಾರು (3000) ಮಣಗಳು.

ಹರಾಜು ಕಾಲದಲ್ಲಿ ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ 87ನೇ ಇಸವಿ ಜೂ॥ 11ನೇ ತಾರೀಖಿನ ನೋಟಿಫಿಕೆಷ್ಟ್ ವೋದಲ್ಪಡುತ್ತದೆ.

ಸಿ. ನಾರಾಯಣರಾವ್,
ಅಸಿಸ್ಟೆಂಟ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್ ಮೈಸೂರು ಡಿಸ್ಟ್ರಿಕ್ಟು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷ್ಟ್.

ಮೈಸೂರು 20ನೇ ಜುಲೈ ಸ್ಯ 1889ನೇ ಇಸವಿ.

ಖರೀದಿಗೆ ಯಿರುವ ಆನೆಗಳು.

ಮೈಸೂರು ಕೀಮೆಯ ಕೆಡ್ಡಾದಲ್ಲಿ ಈಚಿಗೆ ಹಿಡಿಯಲ್ಪಟ್ಟ ಚಿಕ್ಕ ಪ್ರಾಯವಾಗಿಯೂ ಪಳ್ಳೀ ಸ್ಥಿತಿಯಲ್ಲಿಯೂ ಮತ್ತು ಬೇರೆಬೇರೆ ಸೈಜಂ ಉಳ್ಳದ್ದಾಗಿಯೂ ಇರುವ ಹೆಣ್ಣು ಮತ್ತು ಗಂಡು 29 ಆನೆಗಳು ಸ್ಯ 1889ನೇ ಇಸವಿ ಸೆಪ್ಟಂಬರ್ 1ನೇ ತಾರೀಖಿನ ದಿನ ಮೈಸೂರಿಗೆ 14 ಮೈಲಿ ಫಾಸಲೆಯಲ್ಲಿರುವ ನಂಜನಗೂಡಿನಲ್ಲಿ ಬಹಿರಂಗವಾದ ಹರಾಜು ಮೂಲಕ ಮಾರಲ್ಪಡುತ್ತವೆ. ಹರಾಜು ಕಾಲಕ್ಕೆ ಹಾಜರಾಗಲು ಅನುಕೂಲ ವಿಲ್ಲದವರು ತಮಗಾಗಿ ಖರೀದಿಗೆ ತೆಗಿಯುವಂತೆ ಈ ಕೆಳಗೆ ರುಜು ಮಾಡಿರುವವರಿಗೆ ಬರದುಕೊಳ್ಳಬಹುದು. ಮತ್ತು ಹಾಂಗೆ ಬರಿಯುವರು ಯಿಷ್ಟರವರಿಗೆ ಸವಾಲ್ ಮಾಡತಕ್ಕದ್ದೆಂತ ನಮೂದಿಸುತ್ತಾರೋ ಅಷ್ಟರವರಿಗೆ ಸವಾಲ್ ಮಾಡಲ್ಪಡುತ್ತೆ. ಹೀಂಗೆ ಬರಿಯತಕ್ಕ ಪ್ರತಿ ಒಬ್ಬರೂ ತಮ್ಮ ಕಾಗದದ ಸಂಗಡ 300 ರೂಪಾಯಿ ಕಳುಹಿಸಬೇಕು. ಇಲ್ಲವಾಯಿತೆ ಅಂಥಾ ಕಾಗದಕ್ಕೆ ನಿಗೆ ಕೊಡಲ್ಪಡುವದಿಲ್ಲ, ಆನೆ ಖರೀದಿಗೆ ತೆಗಿಯಲ್ಪಡದ ಸಂದರ್ಭದಲ್ಲಿ ಮೊಬಲಗ್ ವಾಪಸ್ ಮಾಡಲ್ಪಡುತ್ತೆ.

2. ಆನೆಗಳ ತಪಸೀಲ್‌ಪಟ್ಟಿ ಈ ಕೆಳಗೆ ನಮೂದಿಸಲ್ಪಟ್ಟಿದೆ. ಬೇಕಾದವರು ಈ ಕೆಳಗೆ ರುಜುಮಾಡಿ ಯಿರತಕ್ಕವರಿಗೆ ಬರದು ಕೊಂಡಲ್ಲಿ ಕಳುಹಿಸಲ್ಪಡುವದು.

3. ಆನೆಗಳನ್ನ ರೈಲ್‌ಮೇಲೆ ಸಾಗಿಸುವದಕ್ಕೆ ಬೇಕಾದ ಕುಮ್ಮಕ್ಕು ಬೇಡಿದಲ್ಲಿ ಕೊಡಲ್ಪಡುವದು.

4. ಬೇಕಡಾ 25 ರೂಪಾಯಿ ಮೇರೆ ಬೇವಣಿ ಮೊಬಲಗು ಸಮೀಪವಾಗಿ ಯಿರುವ ತಾಲ್ಲೂಕು ಖಜಾನೆಗೆ ಕೂಡ್ಲೆ ಪಾವತಿಮಾಡಬೇಕು. ಬಾಕಿ ಮೊಬಲಗನ್ನ ಹರಾಜು ತಾರೀಖು ಲಾಗಾಯತು 15 ದಿವಸದ ಒಳಗಾಗಿ ಮತ್ತು ಆನೆಗಳನ್ನ ಸಾಗಿಸುವದಕ್ಕೆ ಮುಂಚೆ ಪಾವತಿ ಮಾಡಬೇಕು, ತಪ್ಪಿದ ಪಕ್ಷದಲ್ಲಿ ಆ ಖರೀದಿದಾರನ ಅವಗುಣಕ್ಕೆ ಆನೆಗಳು ಪುನಃ ಹರಾಜು ಮಾಡಲ್ಪಡುವವು. ಅಂತಾ ಹರಾಜಿನಲ್ಲಿ ಜಾಸ್ತಿಯೇನಾದರೂ ಹುಟ್ಟುವಳಿ ಆದರೆ ಅದಕ್ಕೆ ಅವ್ವಲ್ ಖರೀದಿದಾರನಿಗೆ ಹಕ್ಕು ಯಿರುವದಿಲ್ಲ.

ಖರೀದಿಗೆ ತೆಗದುಕೊಂಡ ತಾರೀಖು ಲಾಗಾಯತು ಆನೆಗಳ ದಾಣಾಚಾರಾ ವಗೈರೆ ಖರ್ಚುಗಳು ಖರೀದಿದಾರ ವಹಿನತೆಕ್ಕದ್ದು.

ನಂಬರ್.	ಜಾತಿ.	ಎತ್ತರ. ಅಡಿಗಳು.	ಅಂಗುಲಗಳು.	ಸುಮಾರು ವಯಸ್ಸು.	ಕೊಂಬುಗಳು ಉಳ್ಳವು ಯಾವದಾದರೂ ಇದ್ದರೆ.	ಉಗುರುಗಳು	ಬೂಲ ಪೂರ್ತಿ ಯಾ ಅಪೂರ್ತಿಯಿ.	ಷರಾ.
1	ಹೆಣ್ಣು ..	7	0	13		18	ಪೂರ್ತಿಯಾಗಿಧೆ	
2	ಡಿಟೋ ..	7	0	25		18	ಕೊಂಚ ಅಪೂರ್ತಿಯಾಗಿಧೆ	
3	ಡಿಟೋ ..	6	10	15		18	ಪೂರ್ತಿಯಾಗಿಧೆ	
4	ಡಿಟೋ ..	7	2	25		18	ಕೊಂಚ ಅಪೂರ್ತಿಯಾಗಿಧೆ	5ನೇ ನಂಬರ ಆನೆ ವುಳಿಸಿಕೊಳ್ಳಲ್ಪಟ್ಟರುತ್ತೆ.
6	ಕೊಂಬು ವುಳ್ಳದ್ದು ..	6	5	10	ಬಳ್ಳೀದು	18	ಪೂರ್ತಿಯಾಗಿಧೆ	
7	ಹೆಣ್ಣು ..	6	3	11		18	ಪೂರ್ತಿಯಾಗಿಧೆ	
8	ಕೊಂಬು ವುಳ್ಳದ್ದು ...	7	10	15	ಬಹಳ ಬಳ್ಳಿದು	18	ಪೂರ್ತಿಯಾಗಿಧೆ	
9	ಡಿಟೋ ..	7	2	16	ಡಿಟೋ	18	ಪೂರ್ತಿಯಾಗಿಧೆ	
10	ಹೆಣ್ಣು ..	7	9	35		18	ಅಪೂರ್ತಿಯಾಗಿಧೆ	
11	ಡಿಟೋ ..	5	10	10		18	ಪೂರ್ತಿಯಾಗಿಧೆ	
12	ಕೊಂಬು ವುಳ್ಳದ್ದು ..	7	4	14	ಬಹಳ ಬಳ್ಳಿದು	18	ಪೂರ್ತಿಯಾಗಿಧೆ	
13	ಡಿಟೋ ..	4	11	5	ಬಳ್ಳೀದು	18	ಪೂರ್ತಿಯಾಗಿಧೆ	
14	ಡಿಟೋ ..	5	9	7	ಡಿಟೋ	18	ಪೂರ್ತಿಯಾಗಿಧೆ	
15	ಹೆಣ್ಣು ..	5	1	6		18	ಪೂರ್ತಿಯಾಗಿಧೆ	
16	ಡಿಟೋ ..	5	8	7		18	ಪೂರ್ತಿಯಾಗಿಧೆ	
17	ಡಿಟೋ ..	5	6	6		18	ಪೂರ್ತಿಯಾಗಿಧೆ	
18	ಡಿಟೋ ..	6	2	10		18	ಪೂರ್ತಿಯಾಗಿಧೆ	
19	ಕೊಂಬು ವುಳ್ಳದ್ದು ..	6	3	10	ಬಹಳ ಬಳ್ಳಿದು	18	ಪೂರ್ತಿಯಾಗಿಧೆ	
20	ಹೆಣ್ಣು ..	5	2	6		18	ಪೂರ್ತಿಯಾಗಿಧೆ	
21	ಕೊಂಬು ವುಳ್ಳದ್ದು ..	5	3	5		18	ಪೂರ್ತಿಯಾಗಿಧೆ	
22	ಹೆಣ್ಣು ..	4	5	2		18	ಪೂರ್ತಿಯಾಗಿಧೆ	
23	ಡಿಟೋ ..	4	7	2		18	ಪೂರ್ತಿಯಾಗಿಧೆ	
24	ಡಿಟೋ ..	4	4	1½		18	ಪೂರ್ತಿಯಾಗಿಧೆ	
25	ಕೊಂಬು ವುಳ್ಳದ್ದು ..	5	1	3		18	ಪೂರ್ತಿಯಾಗಿಧೆ	
26	ಹೆಣ್ಣು ..	5	0	5		18	ಪೂರ್ತಿಯಾಗಿಧೆ	
27	ಕೊಂಬು ವುಳ್ಳದ್ದು ..	5	4	5	ಬಳ್ಳೀದು	18	ಪೂರ್ತಿಯಾಗಿಧೆ	
28	ಡಿಟೋ ..	4	0	⅔		18	ಪೂರ್ತಿಯಾಗಿಧೆ	29ನೇ ನಂಬರ ಆನೆವುಳಿಸಿಕೊಳ್ಳಲ್ಪಟ್ಟರುತ್ತೆ.
30	ಹೆಣ್ಣು ..	5	1	4		18	ಪೂರ್ತಿಯಾಗಿಧೆ	
31	ಕೊಂಬು ವುಳ್ಳದ್ದು ..	6	0	7	ಬಳ್ಳೀದು	18	ಪೂರ್ತಿಯಾಗಿಧೆ	
29								

ಜೆ. ಪಿ. ಸಾಂಡರ್ಸ್,
ಸೂಪರ್‌ಇಂಟೆಂಡೆಂಟ್ ಆಫ್ ಕೆಡ್ಡಾಸ್.
(ಆನೆ ಸ್ಪೆಷಲ್ ಡ್ಯೂಟಿ) ಮೈಸೂರು.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ಫಾರೆಸ್ಟ್ ಇಲಾಖಾ.

ತಾರೀಖು 14ನೇ ಆಗಸ್ಟ್ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, 1889ನೇ ಇಸವಿ ಸೆಪ್ಟಂಬರ್ ಲಾಗಾಯತು 1890ನೇ ಇಸವಿ ಜುಲೈ ಆಖೈರ್ ವಳಗಾಗಿ ಈ ಕೆಳಗೆ ನಮೂದಿಸುವ ತಾಲ್ಲೂಕುಗಳಿಂದ ಯಲ್ಲಾ ವಣ ಸಂದಲ್‌ಗಳನ್ನೂ ಮತ್ತು ನೆಲದಲ್ಲಿ ಬಿಟ್ಟು ದೇರು ಗಳನ್ನೂ ಜಮಾಯಿಸುವದಕ್ಕೋಸ್ಕರ ಟೆಂಡರ್‌ಗಳನ್ನು ಅಂಗೀಕರಿಸಲ್ಪಡುತ್ತದೆ.

2. ಅಂಥಾ ಟೆಂಡರ್‌ಗಳು ಈ ಕೆಳಗೆ ನಮೂದಿಸುವ ನಮೂನೆಯಂತೆ ಬರೆದು ಈ ತಿಂಗಳು 31ನೇ ತಾರೀಖು ವಳಗಾಗಿ 100 ವಂದು ನೂರು ರೂಪಾಯಿ ಠೇವಣಿ ಸಮೇತ ನಮ್ಮಲ್ಲಿಗೆ ತಲಪಬೇಕು.